# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 30
ಪಿಡಬ್ಲ್ಯೂ: 07

**<u>ದಿನಾಂಕಃ 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ನಾರಪ್ಪ |
| ತಂದೆಯ ಹೆಸರು | : ನಾರಪ್ಪ ಅಲಿಯಾಸ್ ಧರ್ಮಜ್ಜರ ನಾರಪ್ಪ |
| ವಯಸ್ಸು | : 46 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಕೋಣನೂರು |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ</u>**

ನನಗೆ ಸುಮ ಗೊತ್ತು. ವಿಸಿಯಲ್ಲಿ ಕಾಣುತ್ತಿರುವ ಆರೋಪಿ ನಾರಪ್ಪ ಸುಮಾಳ ಗಂಡ. ಆರೋಪಿ ನನ್ನ ಚಿಕ್ಕಪ್ಪನ ಮಗ. ಆರೋಪಿ ಸುಮ ಕಾಣೆಯಾಗಿದ್ದಾಳೆಂದು ದೂರು ಕೊಟ್ಟಿದ್ದಾಗಿ ನನಗೆ ಪೊಲೀಸರು ಹೇಳಿದ್ದರು. ಆರೋಪಿ ಮತ್ತು ಸುಮಾಳ ಮದುವೆ ಸಿರಿಗೆರೆ ಮಠದಲ್ಲಿ ಸುಮಾರು **6** ವರ್ಷದ ಹಿಂದೆ ಆಗಿತ್ತು. ನಾನು ಮದುವೆಗೆ ಹೋಗಿದ್ದೆ. ಮದುವೆಯಾದ ನಂತರ ಗಂಡ ಹೆಂಡತಿ ಕೋಣನೂರಿನಲ್ಲಿ ವಾಸ ಮಾಡುತ್ತಿದ್ದರು. ಅವರಿಗೆ ಒಂದು ಗಂಡು ಮಗು. ಗಂಡ ಹೆಂಡತಿ ಚೆನ್ನಾಗಿದ್ದರು. ನಮ್ಮ ಮನೆ ಅವರ ಮನೆಯ ಪಕ್ಕದಲ್ಲಿದೆ. ಆದರೆ ನಾವು ಅಷ್ಟೊಂದು ಸಂಪರ್ಕದಲ್ಲಿರಲಿಲ್ಲ.

**2.** ಸುಮಾಳ ಶವ ಆರೋಪಿಯ ಮನೆಯಲ್ಲಿ ಮಂಚದ ಕೆಳಗೆ ಹೂತುಹಾಕಿತ್ತು ಎಂದು ಮತ್ತು ಆರೋಪಿಯೇ ಆಕೆಯ ಶವವನ್ನು ಅಲ್ಲಿ ಹೂತುಹಾಕಿದ್ದ ಎಂದು ಪೊಲೀಸರು ತಿಳಿಸಿದ್ದರು. ಆರೋಪಿಯ ಮನೆಯಲ್ಲಿಯೇ ಸುಮಾಳ ಶವ ಸಿಕ್ಕಿತ್ತು. ಅಲ್ಲಿ ದುರ್ವಾಸನೆ ಇರುವುದರಿಂದ ಪೊಲೀಸರು ನಮ್ಮನ್ನು ಅಲ್ಲಿಂದ ಕಳುಹಿಸಿದ್ದರು. ಆ ಮನೆಯಲ್ಲಿ ಆರೋಪಿ, ಸುಮ ಮತ್ತು ಮಗು ಮಾತ್ರ ವಾಸ ಮಾಡುತ್ತಿದ್ದರು. ಯಾರು ಸುಮಾಳನ್ನು ಕೊಲೆ ಮಾಡಿದ್ದರು ನನಗೆ ಗೊತ್ತಿಲ್ಲ.

ಯಾವ ವಿಚಾರಕ್ಕೆ ಕೊಲೆ ಮಾಡಿದ್ದರು ಗೊತ್ತಿಲ್ಲ. ಆರೋಪಿ ಚಿತ್ರದುರ್ಗದಲ್ಲಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಗೊತ್ತು. ಆತ ತನ್ನ ದುಡಿಮೆಯನ್ನು ಏನು ಮಾಡುತ್ತಿದ್ದ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಿಸಿಲ್ಲ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಗಂಡ ಹೆಂಡತಿ ನಡುವೆ ಜಗಳವಾಗುತ್ತಿದೆ ಎಂದು ಹೊರಗಿನವರು ಹೇಳಿದ್ದರು. ಆದರೆ ನಾನೇನು ಅವರ ಮನೆಗೆ ಹೋಗಿ ಸಮಾಧಾನಪಡಿಸಿ ಬಂದಿರಲಿಲ್ಲ.

(ಈ ಹಂತದಲ್ಲಿ ಪಿ ಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯು ಹೇಳಿಕೆಯಲ್ಲಿನ ವಿಷಯಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಪಾಟೀ ಸವಾಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

**3.** ಆರೋಪಿ ಮತ್ತು ಸುಮ ಆಗಾಗ ಜಗಳ ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ ಒಂದೆರಡು ಬಾರಿ ಅವರ ಮನೆಗೆ ಹೋಗಿ ಗಂಡ ಹೆಂಡತಿ ಇಬ್ಬರಿಗೂ ಸಮಾಧಾನಪಡಿಸಿ ಬಂದಿದ್ದೆ ಎನ್ನುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದ ನಿಪಿ–**13** ರಂತೆ "ನಾರಪ್ಪ ಮತ್ತು ಸುಮ ............. ಸಮಾಧನಾಪಡಿಸಿ ಬಂದಿದ್ದೆನು" ಎಂದು ಹೇಳಿಕೆ ಕೊಟ್ಟಿದ್ದೆ ಎನ್ನುವುದು ಸರಿಯಲ್ಲ.

**4.** ಆರೋಪಿ ನನ್ನ ಸ್ವಂತ ಚಿಕ್ಕಪ್ಪನ ಮಗ ಎಂದರೆ ನಿಜ. ಆರೋಪಿ ಮತ್ತು ಸುಮ ಜಗಳವಾಡುತ್ತಿದುದು ನನಗೆ ವೈಯಕ್ತಿಕವಾಗಿ ಗೊತ್ತು ಎನ್ನುವುದು ಮತ್ತು ನಾನು ಅವರ ಮನೆಗೆ ಹೋಗಿ **1–2** ಸಲ ಜಗಳ ಬಿಡಿಸಿ ಸಮಾಧಾನಪಡಿಸಿ ಬಂದಿದ್ದರೂ ಸಹ ಮತ್ತು ಆ ಬಗ್ಗೆ ನಿಪಿ–**13** ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿ ನನ್ನ ಸ್ವಂತ ಚಿಕ್ಕಪ್ಪನ ಮಗನಾಗಿದ್ದರಿಂದ ಆತನಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ
ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.